# ಖಾತರಿಯಾಗಿದೆ


ಬಂದೆವು ನಿಮ್ಮ ಹಿಂದೆ
ತಿರುಗಿ ನೋಡಬಹುದೆಂದು ಒಮ್ಮೆ

ಗೊತ್ತು ನಿಮಗೂ
ಸಣ್ಣ ಆಸೆಹಿಡಿದು ಬದುಕುತ್ತಿರುವ ನಾವು:
'ಮೂರು ಹೆಜ್ಜೆಯ ಬಲಿಯ' ಪಾತ್ರಗಳು
ಆದಿಕಾಲದ ನೋವಿನ ಕೊಳಲು

ಇದು ಯುಗಗಳ ಕೂಗು
ತಲುಪಬಹುದೆಂಬ ನಂಬಿಕೆಯಲಿ
ಸೋತದ್ದು
ಕಣ್ಣುಗಳಲಿ ನೀರಿಲ್ಲ ಅಳಲು ಕೂಡ ಇಂದು
ಆಗಸದಲಿ ಕಠೋರ ಮೋಡಗಳು
ಊಟದ ತಟ್ಟೆಯಲಿ ಪ್ರಶ್ನೆಗಳು

ಖಾತರಿಯಾಗಿದೆ ಈಗ:
ಯಾರದೋ ಆಕಳಿಕೆ ನಮ್ಮ
ಭಜನೆಯಾದ ಕತೆಗಳು
ದೇವರಾದ ಕಾರಣ
ಕಳೆದು ಹೋಯಿತು ಅಪ್ಪನ ಮೆದುಳು
ಮುಚ್ಚಿಕೊಳ್ಳುವ ಕಷ್ಟಕೆ ಅವ್ವ ಶವವಾದಳು
ಮತ್ತು
'ಈ ಜಗತ್ತು ನಮಗೂ ಇದೆ'
ಎಂದವರ ಮಾತು ನಂಬಿ 'ಪಾಲು'
ಸಿಗದಾಯಿತು.

• **ಉಮೇಶ ನಾಯ್ಕ**



ನಾಗೇಶ ಹೆಗಡೆ